2	ರಾಷ್ಟ್ರೀಯ ತೋಟಗಾರಿಕಾ ಮಿಷನ್ (N.H.M)	19	5266.50	1246.37	1246.37	6 ಕಾಮಗಾರಿಗಳು ಪೂರ್ಣಗೊಂಡಿದೆ
3	ಗ್ರಾಮೀಣ ಭಂಡಾರ ಯೋಜನೆ	282	4339.00	1084.75	–	
4	ಡಿ.ಎಂ.ಐ ಯೋಜನೆ (D.M.I.)	16	12288.00	3072.00	–	
5	ಅಸೈಡ್ ಯೋಜನೆ (ASIDE)	02	26.30	18.40	–	ಟೆಂಡರ್ ಪ್ರಕ್ರಿಯೆಯಲ್ಲಿದೆ
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (R.K.V.Y)	45	1450.00	1450.00	1050.00	ಕಾಮಗಾರಿಗಳು ಪ್ರಗತಿಯಲ್ಲಿವೆ

ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳು

986 (1521) ಶ್ರೀ ಹ್ಯಾರಿಸ್ ಎನ್. ಎ. (ಶಾಂತಿ ನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ಮಾರುಕಟ್ಟೆಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು? (ವಿವರ ನೀಡುವುದು);

ಆ) ಮೂಲ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಲು ಸರ್ಕಾರ ಎಷ್ಟು ಮೊತ್ತದ ಹಣವನ್ನು ವೆಚ್ಚ ಮಾಡಲುದ್ದೇಶಿಸಿದೆ? ಅಭಿವೃದ್ಧಿ ಕಾರ್ಯಗಳ ಪ್ರಗತಿಯ ವಿವರಗಳೇನು?

ಇ) ಕೃಷಿ ಮಾರುಕಟ್ಟೆಗಳಿಗೆ ಪೂರಕವಾಗಿ ಒಟ್ಟು ಎಷ್ಟು ಗೋದಾಮುಗಳನ್ನು ಸರ್ಕಾರ ನಿರ್ಮಿಸಿದೆ ನೂತನವಾಗಿ ನಿರ್ಮಿಸಲಿರುವ ಗೋದಾಮುಗಳೆಷ್ಟು? (ವಿವರ ನೀಡುವುದು);

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಮುಖ್ಯವಾಗಿ ಸಮಿತಿಯ ನಿಧಿಯಿಂದ ವಾರ್ಷಿಕ ಕ್ರಿಯ ಯೋಜನೆಯಡಿಯಲ್ಲಿ ಮಾರುಕಟ್ಟೆ ಪ್ರಾಂಗಣ ಹಾಗೂ ಮಾರುಕಟ್ಟೆ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುತ್ತವೆ. ರಾಜ್ಯ ಸರ್ಕಾರದಿಂದ ಲಭ್ಯವಾಗುವ ಅರ್.ಐ.ಡಿ.ಎಫ್. ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುದಾನ ದಿಂದ ಅವಶ್ಯಕೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಮುಂದುವರೆದು, ಕೇಂದ್ರ ಸರ್ಕಾರದ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆ, ಡಿ.ಎಂ.ಐ. ಯೋಜನೆ, ಅಸ್ಕೆಡ್ ಯೋಜನೆ, ಗ್ರಾಮೀಣ ಭಂಡಾರ ಯೋಜನೆಗಳಲ್ಲಿ ಸಹಾಯಧನ ಪಡೆದು ಕೃಷಿ ಮಾರುಕಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಜರುಗಿಸಲಾಗುತ್ತಿದೆ.

ಆ) ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಇ) ಕೃಷಿ ಮಾರಾಟ ಇಲಾಖೆಯಿಂದ ಇಂತಹ ಪ್ರಸ್ತಾವನೆಗಳನ್ನು ಕೈಗೊಳ್ಳುವುದಿಲ್ಲ ಕೃಷಿ ಮಾರುಕಟ್ಟೆ ಸಮಿತಿಗಳು ಕೇಂದ್ರ ಸರ್ಕಾರದ ಶೇ.25.00 ರಷ್ಟು ಸಹಾಯಧನದ ಯೋಜನೆಯಾದ ಗ್ರಾಮೀಣ ಭಂಡಾರ ಯೋಜನೆಯಡಿಯಲ್ಲಿ 2006–07ನೇ ಸಾಲಿನಲ್ಲಿ 69 ಸಂಖ್ಯೆ ಗೋದಾಮು ಗಳು, 2007–08ನೇ ಸಾಲಿನಲ್ಲಿ 108 ಸಂಖ್ಯೆ ಗೋದಾಮುಗಳು, 2008–09ನೇ ಸಾಲಿನಲ್ಲಿ 210 ಸಂಖ್ಯೆ ಗೋದಾಮುಗಳು ಮತ್ತು 2009–10ನೇ ಸಾಲಿನಲ್ಲಿ 282 ಸಂಖ್ಯೆ ಗೋದಾಮುಗಳು ಸೇರಿದಂತೆ ಒಟ್ಟು 669 ಗೋದಾಮುಗಳು ಮಂಜೂರಾಗಿದ್ದು 272 ಗೋದಾಮುಗಳು ಪೂರ್ಣ ಗೊಂಡಿರುತ್ತವೆ.

ಪ್ರಸ್ತುತ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 20 ಗೋದಾಮು ಮತ್ತು ಆರ್.ಐ.ಡಿ.ಎಫ್. ಯೋಜನೆಯಲ್ಲಿ 11 ಗೋದಾಮುಗಳನ್ನು ನಿರ್ಮಿಸಲಾಗುತ್ತಿದೆ.

ಅನುಬಂಧ – 1

ಮೂಲ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರದಿಂದ 2009–10ನೇ ಸಾಲಿಗೆ ಸಂಬಂಧಪಟ್ಟಂತೆ ವಿವಿಧ ಯೋಜನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ ಹೆಸರು	ಒಟ್ಟು ಕಾಮಗಾರಿಗಳ ಸಂಖ್ಯೆ	ಒಟ್ಟಾರೆ ಯೋಜನಾ ಮೊತ್ತ	ಕೇಂದ್ರ/ರಾಜ್ಯ ಸರ್ಕಾರದಿಂದ ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನದ ಮೊತ್ತ	ಷರಾ
1	ಆರ್‌ಐಡಿಎಫ್–15	16	500.00	450.00	–	ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದೆ
2	ರಾಷ್ಟ್ರೀಯ ತೋಟಗಾರಿಕಾ ಮಿಷನ್ (N.H.M)	19	5266.50	1246.37	1246.37	6 ಕಾಮಗಾರಿಗಳು ಪೂರ್ಣಗೊಂಡಿದೆ
3	ಗ್ರಾಮೀಣ ಭಂಡಾರ ಯೋಜನೆ	282	4339.00	1084.75	–	
4	ಡಿ.ಎಂ.ಐ ಯೋಜನೆ (D.M.I.)	16	12288.00	3072.00	–	
5	ಅಸೈಡ್ ಯೋಜನೆ (ASIDE)	02	26.30	18.40	–	ಟೆಂಡರ್ ಪ್ರಕ್ರಿಯೆಯಲ್ಲಿದೆ
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (R.K.V.Y)	45	1450.00	1450.00	1050.00	ಕಾಮಗಾರಿಗಳು ಪ್ರಗತಿಯಲ್ಲಿವೆ